7. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

8. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1993

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಬಹಳ ಸಣ್ಣ ವಿಧೇಯಕ. ಈಗ ಸಿವಿಲ್ ನ್ಯಾಯ ಸ್ಥಾನಕ್ಕೆ ಲಘು ವ್ಯಾಜ್ಯ ತೀರ್ಮಾನ ಮಾಡುವುದಕ್ಕೆ ಮಿತಿ 3 ಸಾವಿರ ರೂಪಾಯಿ ಇದೆ. ಮುನ್ಸೀಫ್ ಕೋರ್ಟ್ನವರಿಗೆ 500 ರೂಪಾಯಿ ಇದೆ. ಉಚ್ಚ ನ್ಯಾಯಾಲಯದ ಸಲಹೆ ಮೇರೆಗೆ ಈ ಮಿತಿಯನ್ನು ಸಿವಿಲ್ ನ್ಯಾಯಾಲಯಗಳಿಗೆ 25 ಸಾವಿರ ರೂಪಾಯಿ ಮತ್ತು ಮುನ್ಸೀಫ್ ನ್ಯಾಯಾಲಯಗಳಿಗೆ 3 ಸಾವಿರ ರೂಪಯಿ ಆಗಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರ ಪರಿಣಾಮವಾಗಿ ಅನೇಕ ಸಿವಿಲ್ ವ್ಯವಹಾರಗಳು ತಕ್ಷಣ ತೀರ್ಮಾನವಾಗಿ ಬೇಗ ನ್ಯಾಯ ನಿರ್ವಹಣೆ ಆಗುವುದಕ್ಕೆ ಅವಕಾಶವಾಗುತ್ತದೆ. ಈ ತಿದ್ದುಪಡಿಯನ್ನು ಸಭೆ ಅಂಗೀಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತಿದ್ದುಪಡಿಯನ್ನು ನಾವು ಜನತೆಯ ಹಿತದೃಷ್ಟಿಯಿಂದ ಸ್ವಾಗತಿಸುತ್ತೇವೆ. ಇದರ ಬಗ್ಗೆ ಚರ್ಚೆ ಮಾಡತಕ್ಕದ್ದು ಏನೂ ಇಲ್ಲ. ಇದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಈ ತಿದ್ದುಪಡಿಯನ್ನು ನಾವು ಒಪ್ಪಬಹುದಾಗಿದೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "1993ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3 :

ಅಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ಕ್ಕೆ ತಿದ್ದುಪಡಿ :

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಖಂಡ 4ರಲ್ಲಿ ತಿದ್ದುಪಡಿ ತಂದಿದ್ದು ಅದು ಈ ರೀತಿ ಇದೆ :

ಖಂಡ -4

(ಅ) (1)ನೇ ಉಪಖಂಡದಲ್ಲಿ ("1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ ಬದಲಾಗಿ 1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 9 ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) (ಸಂಖ್ಯೆ 2) ವಿಧೇಯಕ, 1993 (1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 9) ಎಂಬ ಪದಗಳು ಅಂಕಿಗಳು ಮತ್ತು ಆವರಣಗಳು ಪ್ರತಿಯೋಜಿಸತಕ್ಕದ್ದು.

(ಆ) (2)ನೇ ಉಪ-ಖಂಡದಲ್ಲಿ "ಸದರಿ ಅಧ್ಯಾದೇಶ" ಎಂಬ ಪದಗಳಿಗೆ ಬದಲಾಗಿ "ಸದರಿ ಅಧ್ಯಾದೇಶಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಈಗ ಖಂಡ 4ಕ್ಕೆ ತಿದ್ದುಪಡಿಯಲ್ಲಿ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಶ್ನೆ ಏನೆಂದರೆ

ಅ) (1)ನೇ ಉಪಖಂಡದಲ್ಲಿ ("1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ :3) ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ ಬದಲಾಗಿ 1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 9 ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ಸಂಖ್ಯೆ 2) ವಿಧೇಯಕ, 1993 (1993ರ ಕರ್ನಾಟಕ ಅಧ್ಯಾದೇಶ ಸಂಖ್ಯೆ .9) ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

ಆ) (2)ನೇ ಉಪ-ಖಂಡದಲ್ಲಿ "ಸದರಿ ಅಧ್ಯಾದೇಶ" ಎಂಬ ಪದಗಳಿಗೆ ಬದಲಾಗಿ "ಸದರಿ ಅಧ್ಯಾದೇಶಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟತು.

ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಈ ಪ್ರಶ್ನೆ ಏನೆಂದರೆ :

"ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಹಾಗೂ ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿ ನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ : 1993ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

6-00 P.M

(2) ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಇದು ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ಕರ್ನಾಟಕ ಎಕ್ಸೈಸ್ ಆಕ್ಟ್ 1965 ಇದನ್ನು ಇವತ್ತು ತಿದ್ದುಪಡಿ ಮಾಡುವ ಉದ್ದೇಶ ಏನು ಬಾಟ್ಲಿಂಗ್ ಕಾಂಟ್ರಾಕ್ಟಗೆ ಅವಕಾಶ ನಮ್ಮ ಕಾನೂನು ಪ್ರಕಾರ ಕೊಟ್ಟಿತು, ಅದನ್ನು ಆ ವಾಯದೆಗೆ ಮೊದಲು ಖಾಸಗಿಯಾಗಿ ಕೊಟ್ಟಿದ್ದನ್ನು ರದ್ದು ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದೀವೆ. 30ನೇ ತಾರೀಖು ಜೂನ್ 1993ರ ಅಂತ್ಯಕ್ಕೆ ಅದನ್ನು ರದ್ದುಪಡಿಸಲಾಗಿದೆ ಮತ್ತು ಈ ಕಾರ್ಯಭಾರವನ್ನು ಮೈಸೂರು ಶುಗರ್ ಮಿಲ್ ಮತ್ತು ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ ಈ ಎರಡು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ 1ನೇ ತಾರೀಖು ಜುಲೈ 1993ರಂದು ವಹಿಸಿಕೊಟ್ಟಿದ್ದೇವೆ. ಒಂದು ವ್ಯವಹಾರವನ್ನು ಇವತ್ತು ಸಂವಿಧಾನ ಪ್ರಕಾರ ಅವರಿಗೆ ಈ ವಿಧೇಯಕ ಮೂಲಕ ನಾವು ಒಪ್ಪಿಸಬೇಕೆಂದು ಈ ವಿಧೇಯಕವನ್ನು ತರಲಾಗಿದೆ.

+ಶ್ರೀ ಎಚ್. ವಿಕಾಂತಯ್ಯ (ಚಿತ್ರದುರ್ಗ) : ಇದಕ್ಕೆ ಪೂರಕವಾಗಿ ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಒಂದು ವಿಧೇಯಕವನ್ನು ಏನು ಮಂಡಿಸಿದ್ದಾರೆ, ಅದು ಈ ಸಭೆ ಯಾವುದೇ ದೃಷ್ಟಿಯಿಂದ ಒಪ್ಪಲಾರದಂಥ ಒಂದು ವಿಧೇಯಕ. ಒಂದು ಹೊಸ ದಾಖಲೆಯನ್ನೇ ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಈ ದಿಸೆಯಲ್ಲಿ 'ದಾಖಲಿಸದೆ ಎಂದು ಹೇಳಿದರೆ ತಪ್ಪಾಗಲಾಗದು. ಅವರು ಪೂರ್ಣವಾದಂಥ ವಿಚಾರಗಳನ್ನು ಪ್ರಾಸ್ತಾವಿಕ ಭಾಷಣದಲ್ಲಿ ಹೇಳದೇ ಇರುವುದರಿಂದ ಕೆಲವು ವಿಚಾರಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಮ್ಮ ಕೈಕೆಳಗೆ ಈ ರಾಜ್ಯದಲ್ಲಿ ಇರುವಂಥ ಕಾನೂನು ಇಲಾಖೆ ಹೇಗೆ ತಮ್ಮ ಕರ್ತವ್ಯಚ್ಯುತಿಯಲ್ಲಿ ತೊಡಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ನಾನು ಬೆಳಿಗ್ಗೆ ವಿವರಗಳನ್ನು ಪಡೆಯಲಿಕ್ಕೆ ಎಂದು ಸಂಬಂಧಪಟ್ಟವರಲ್ಲಿಗೆ ಹೋದಾಗ, ಈಗ ಬರುತ್ತಿದೆ ಅರ್ಧಂಬರ್ಧ ತಿದ್ದುಪಡಿ ವಿಧೇಯಕ. ಸನ್ಮಾನ್ಯ ಅಧ್ಯಕ್ಷರೇ, ಇದರ ಕತೆಯನ್ನು ಹೇಳುವುದಾದರೆ, ಹೇಗೆ ನಮ್ಮ ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಇರುವಂಥ ಅಧಿಕಾರಿಗಳು ತಮ್ಮ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಕೈಗನ್ನಡಿಯಾಗಿದೆ.

ನಾನು ಕೇವಲ ಮುಖ್ಯಮಂತ್ರಿಗಳನ್ನು ದೂರುವುದಿಲ್ಲ. ಅವರು ಎಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲ. ತಮಗೆ ಸಹಾಯ ಮಾಡುವುದಕ್ಕೆ ಕಾನೂನು ಇಲಾಖೆ ಇದೆ ಆಡಳಿತ ಇಲಾಖೆ ಇದೆ. ಇದನ್ನು ಸ್ವಲ್ಪ ವಿವರವಾಗಿ ಹೇಳಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ 1993ನೇ ಇಸವಿ ಮೇ 10ರಂದು ಒಂದು ಸುಗ್ರೀವಾಜ್ಞೆಯನ್ನು ರಾಜ್ಯ ಸರ್ಕಾರದವರು ಹೊರಡಿಸುತ್ತಾರೆ. ತಮಗೆ ಗೊತ್ತಿರುವ ಹಾಗೆ, ಈ ಸದನ